Kerala Gazette No. 37 dated 21st September 2021.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಸಿ) ಇಲಾಖೆ

## ಅಧಿಸೂಚನೆ

*2018 ಸೆಪ್ಟಂಬರ್ 15,*

ನಂಬ್ರ 19228/ಲೆಗ್. ಸಿ1/2018/ಕಾನೂನು. *ತಿರುವನಂತಪುರಂ,* *1194 ಸಿಂಹ 30/*

*1940 ಭಾದ್ರಪದ 24.*

2018 ಸೆಪ್ಟಂಬರ್ 14ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

2018ರ 49ನೇ ನಂಬ್ರ ಅಧ್ಯಾದೇಶ

# 2018ರ ಕೇರಳ ಮುನಿಸಿಪಾಲಿಟಿ (ಮೂರನೇ ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದು

1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ ಒಂದು ಅಧ್ಯಾದೇಶ

ಪೀಠಿಕೆ.—1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಮತ್ತು ತಾನು ತ್ವರಿತ ಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುವರು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಕೇರಳ ಮುನಿಸಿಪಾಲಿಟಿ (ಮೂರನೇ ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 1994ರ 20ನೇ ಅಧಿನಿಯಮವು ತಾತ್ಕಾಲಿಕವಾಗಿ ತಿದ್ದುಪಡಿ ಮಾಡತಕ್ಕದ್ದು.—ಈ ಅಧ್ಯಾದೇಶವು ಜಾರಿಯಲ್ಲಿರುವ ಕಾಲಾವಧಿಯಲ್ಲಿ, 1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ವು, 3ನೇ ವಿಭಾಗದಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗೆ ವಿಧೇಯವಾಗಿ ಪರಿಣಾಮಕಾರಿಯಾಗತಕ್ಕದ್ದು.

3. 326ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 326ನೇ ವಿಭಾಗದಲ್ಲಿ, (3)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) ಈ ಅಧಿನಿಯಮದ ಅಥವಾ ತತ್ಕಾಲ ಪ್ರಾಬಲ್ಯದಲ್ಲಿರುವ ಇತರ ಯಾವುದಾದರು ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ, ಸರಕಾರಕ್ಕೆ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಹಾಗೂ ಆ ರೀತಿಯಲ್ಲಿ ಮಾಡುವುದು ಯುಕ್ತವೆಂದು ಮನಗಂಡಲ್ಲಿ ಘನ ತ್ಯಾಜ್ಯಗಳನ್ನು, ಕಸಗಳನ್ನು, ತ್ಯಾಜ್ಯಗಳನ್ನು ಹಾಗೂ ಅಂತಹ ಇತರ ವಸ್ತುಗಳನ್ನು ಎರಡು ಅಥವಾ ಎರಡಕ್ಕಿಂತ ಹೆಚ್ಚು ಮುನಿಸಿಪಾಲಿಟಿಗಳಿಂದ ಪ್ರತ್ಯಕ್ಷವಾಗಿ ಅಥವಾ ಸರಕಾರ ಅಧಿಕೃತಗೊಳಿಸಿದ ಏಜೆನ್ಸಿಯ ಮುಖಾಂತರ ಸಂಗ್ರಹಿಸುವುದಕ್ಕಾಗಿ, ಕೊಂಡುಹೋಗುವುದಕ್ಕಾಗಿ, ತೊಲಗಿಸುವುದಕ್ಕಾಗಿ ಹಾಗೂ ಸಂಸ್ಕರಿಸುವುದಕ್ಕಾಗಿ ಕರಾರು ತಳಹದಿಯಲ್ಲಿ ಅಥವಾ ಇತರ ರೀತಿಯಲ್ಲಿ ಏರ್ಪಾಡು ಮಾಡಬಹುದಾಗಿದೆ ಅಥವಾ ಘನ ತ್ಯಾಜ್ಯಗಳನ್ನು, ಕಸಗಳನ್ನು, ತ್ಯಾಜ್ಯಗಳನ್ನು ಹಾಗೂ ಅಂತಹ ಇತರ ವಸ್ತುಗಳನ್ನು ಸಂಗ್ರಹಿಸುವುದಕ್ಕಾಗಿ, ಕೊಂಡುಹೋಗುವುದಕ್ಕಾಗಿ, ತೊಲಗಿಸುವುದಕ್ಕಾಗಿ ಹಾಗೂ ಸಂಸ್ಕರಿಸುವುದಕ್ಕಾಗಿ ಗಣನೀಯ ವೆಚ್ಚದ ಯಾವುದೇ ಯೋಜನೆಯನ್ನು ಕೈಗೊಳ್ಳಬಹುದಾಗಿದೆ.".

**ಪಿ. ಸದಾಶಿವಮ್,**

ರಾಜ್ಯಪಾಲರು.



Salim A Digitally signed by Salim A
Date: 2021.09.30 21:04:32
+05'30'